ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಶುಕ್ರವಾರ, ದಿನಾಂಕ : 26ನೇ ಜುಲೈ, 2019

ಸೇತುವೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ

ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-

642 (100) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಮನಗರ ಟೌನಿನ ಅಗ್ರಹಾರದ ಅಭಯ ಆಂಜನೇಯಸ್ವಾಮಿ ದೇವಸ್ಥಾನದ ರಸ್ತೆಯಿಂದ (ವಾರ್ಡ್ ನಂ.6 ಇಂಡಸ್ಟ್ರಿಯಲ್ ಏರಿಯಾಗೆ ಬಿ.ಎಂ.ರಸ್ತೆಗೆ) ಸಂಪರ್ಕ ಕಲ್ಪಿಸುವ ಅರ್ಕಾವತಿ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಸೇತುವೆಗೆ 2012-13ರಲ್ಲಿ

ವರ್ಕ್ ಆರ್ಡರ್ ಆಗಿದ್ದು, ಇದುವರೆವಿಗೂ ಕಾಮಗಾರಿ ಪೂರ್ಣಗೊಳ್ಳದಿರಲು ಕಾರಣಗಳೇನು ;

(ಆ) ಸನ್ಮಾನ್ಯ ಮುಖ್ಯಮಂತ್ರಿಗಳ ವಿಧಾನಸಭಾ ಕ್ಷೇತ್ರದಲ್ಲೇ ಒಂದು ಸೇತುವೆಯನ್ನು ನಿರ್ಮಿಸಲು (ಏಳು) ವರ್ಷಗಳ ಧೀರ್ಘಾವಧಿ ತೆಗೆದು ಕೊಂಡಿರುವುದು ಸಮಂಜಸವೇ ;

(ಇ) ಸೇತುವೆ ನಿರ್ಮಾಣ ವಿಳಂಬದಿಂದ ಹಳೆಯ ಟೌನ್ ಬಿ.ಎಂ. ರಸ್ತೆ ಸೇತುವೆಯ ಮೇಲೆ ವಾಹನ ಮತ್ತು ಜನ ಸಂಚಾರ ಒತ್ತಡ ಜಾಸ್ತಿಯಾಗಿರುವುದು ನಿಜವೇ ;

(ಈ) ಹಾಗಿದ್ದಲ್ಲಿ, ಸೇತುವೆ ನಿರ್ಮಾಣ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದೇ ?